# ಮಂಗಳೂರು ವಿಶ್ವವಿದ್ಯಾನಿಲಯ
# MANGALORE UNIVERSITY

## ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠ
## BRAHMASHRI NARAYANAGURU ADHYAYANA PEETHA

Phone: 0824-2284689, 9845665807, Email: narayanagurupeethamu@gmail.com


# ಗುರುನಡೆ ಗ್ರಾಮದೆಡೆ

## ನಾರಾಯಣ ಗುರುಗಳ ಶಿಕ್ಷಣ ಸಂದೇಶ ಅಭಿಯಾನ

### ಪರಿಕಲ್ಪನೆ

ವಿಶ್ವವಿದ್ಯಾನಿಲಯದಲ್ಲಿ ನಾರಾಯಣ ಗುರು ಅಧ್ಯಯನ ಪೀಠದ ಉದ್ದೇಶ ಮನುಷ್ಯ ಧರ್ಮವನ್ನು ಜಗತ್ತಿಗೆ ಸಾರಿದ ಅವರ ತತ್ವ ಸಂದೇಶಗಳನ್ನು ವಿದ್ಯಾರ್ಥಿ ಸಮುದಾಯಕ್ಕೆ ಮುಟ್ಟಿಸುವ ಮೂಲಕ ಅವರನ್ನು ಜಾಗೃತಗೊಳಿಸುವುದು. ಸ್ವಾವಲಂಬಿ ಸ್ವಾಭಿಮಾನದ ಬದುಕಿಗೆ ಶಿಕ್ಷಣದ ಮೂಲಕ ಅರಿವು ಮೂಡಿಸುವುದು. ಮನಸ್ಸು ಮನಸ್ಸುಗಳನ್ನು ಕಟ್ಟುವುದರೊಂದಿಗೆ ಸಾಮರಸ್ಯದಿಂದ ಸಮಾಜ ಕಟ್ಟುವ, ದೇಶ ಕಟ್ಟುವ, ಬದುಕು ಕಟ್ಟಿಕೊಳ್ಳುವ ಕ್ರಿಯಾಶೀಲತೆಗೆ ಪರಿವರ್ತನೆಗೆ ಯುವ ಸಮುದಾಯವನ್ನು ತರಬೇತಿಗೊಳಿಸುವುದು. ವ್ಯಕ್ತಿ ವ್ಯಕ್ತಿಯ ಸಂಬಂಧ, ವ್ಯಕ್ತಿ ಬದುಕಿನ ಸಂಬಂಧ ವ್ಯಕ್ತಿ ಸಮಾಜದ ಸಂಬಂಧಗಳನ್ನು ಬೆಸೆಯುವುದು.

### ಆಶಯ

ಈ ನಿಟ್ಟಿನಲ್ಲಿ ಪ್ರಮುಖವಾಗಿ ಎರಡು ನೆಲೆಗಳಲ್ಲಿ ಅಧ್ಯಯನ ಪೀಠ ಕಾರ್ಯಪ್ರವೃತ್ತವಾಗಬೇಕು ಎಂಬುದು ಆಶಯ.

1. ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಅಧ್ಯಯನ, ಸಂಶೋಧನೆ, ವೈಚಾರಿಕ ಚಿಂತನೆ ಮತ್ತು ಪ್ರಕಟಣೆಗಳ ಮೂಲಕ ಯುವ ಜನಾಂಗವನ್ನು ಜಗತ್ತಿಗೆ ಮುಖಾಮುಖಿಯಾಗಿಸುವುದು.
2. ಗ್ರಾಮೀಣ ಮಟ್ಟದಲ್ಲಿ ಜನಸಮಾನ್ಯರ ಬದುಕಿಗೆ ಸಂಸ್ಕೃತಿ, ಸಂಸ್ಕಾರ, ಶಿಕ್ಷಣ, ಅಧ್ಯಯನದ ಪ್ರಾಮುಖ್ಯತೆಯನ್ನು ಗುರುಗಳ ತತ್ವಚಿಂತನೆಯ ಮೂಲಕ ತಿಳಿಸುವುದರೊಂದಿಗೆ ವಿಶ್ವವಿದ್ಯಾನಿಲಯದ ವಿಶ್ವ ತತ್ವವನ್ನು ಮನೆ ಮನೆಗೆ ಮುಟ್ಟಿಸುವುದು.

### ಸಂಯೋಜನೆ : 'ಗುರುನಡೆ ಗ್ರಾಮದೆಡೆ'

1. ವಿಶ್ವವಿದ್ಯಾನಿಲಯದ ಮೂಲನೆಲೆ, ಮೂಲ ಸೆಲೆಯಾಗಿರುವ ಸುತ್ತಮುತ್ತಲಿನ ಗ್ರಾಮಗಳನ್ನು ಪ್ರಧಾನವಾಗಿಸಿಕೊಂಡು ದ.ಕ., ಉಡುಪಿ, ಕಾಸರಗೋಡು ಜಿಲ್ಲೆಗಳಲ್ಲಿ ವ್ಯವಸ್ಥೆಗೆ ಅನುಕೂಲವಿರುವ ಶಾಲೆ, ಕಾಲೇಜು ಮತ್ತು ಸಂಘಸಂಸ್ಥೆಗಳನ್ನು ಸಂಪರ್ಕಿಸಿ ಸಂದೇಶ ಅಭಿಯಾನವನ್ನು ನಡೆಸುವುದು.
2. ತಿಂಗಳ ಮೊದಲ ಶನಿವಾರ ಮತ್ತು ಮೂರನೇ ಶನಿವಾರ ತಿಂಗಳಿಗೆ ಎರಡರಂತೆ ಅಭಿಯಾನ ಸಂಯೋಜನೆ.
3. ನಾರಾಯಣ ಗುರುಗಳ ಬಾಲ್ಯ, ಬದುಕು, ಸಂದೇಶ, ಹೋರಾಟ, ಸಾಮಾಜಿಕ ಸಮಾನತೆ, ಧರ್ಮ ಸಮನ್ವಯಕ್ಕೆ ಸಂಬಂಧಿಸಿದಂತೆ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಲಾಗುವುದು.
4. ಮೊದಲ ಉದ್ಘಾಟನಾ ಕಾರ್ಯಕ್ರಮವನ್ನು ಮಾರ್ಚ್ ತಿಂಗಳಲ್ಲಿ ಕೊಣಾಜೆ ಗ್ರಾಮದಲ್ಲಿ ವಿಶ್ವವಿದ್ಯಾನಿಲಯದ ಹತ್ತಿರ ಸಂಯೋಜಿಸಲಾಗುವುದು.
5. ಅಭಿಯಾನದ ಕೊನೆಯಲ್ಲಿ ಅಥವಾ ನಾರಾಯಣ ಗುರುಗಳ ಹುಟ್ಟುಹಬ್ಬದ ಸಂದರ್ಭದಲ್ಲಿ **"ಗುರುನಡೆ ಗ್ರಾಮದೆಡೆ–ಗ್ರಾಮ ಸಂಭ್ರಮ"** ಎಂಬ ಗ್ರಾಮ ಸಂಯೋಜನೆಯ ಸಮಾರಂಭವನ್ನು ಮಂಗಳೂರು ವಿಶ್ವವಿದ್ಯಾನಿಲಯದ 26 ಅಧ್ಯಯನ ಪೀಠಗಳ ಸಮ್ಮುಖದಲ್ಲಿ ಮಂಗಳ ಸಭಾಂಗಣದಲ್ಲಿ ನಡೆಸಲಾಗುವುದು. ಈ ಸಮಾರಂಭದಲ್ಲಿ ವಿಶ್ವವಿದ್ಯಾನಿಲಯದ ಎಲ್ಲಾ ಅಧ್ಯಯನ ಪೀಠಗಳ ನಿರ್ದೇಶಕರು, ಸಂಯೋಜಕರು, ಸಂಶೋಧನಾ ಸಹಾಯಕರೊಂದಿಗೆ ವಿದ್ಯಾರ್ಥಿಗಳೂ ಪಾಲ್ಗೊಳ್ಳುವಂತೆ ಆಹ್ವಾನಿಸುವುದು.

**ಡಾ. ಗಣೇಶ್ ಅಮೀನ್ ಸಂಕಮಾರ್**
ಸಂಯೋಜಕರು